ಓ.ಎಸ್‌ಃ   **೩೮೮/೨೦೨೨**

ಪಿ. ಡಬ್ಲ್ಯೂ ಃ 01

<u>ಸಾಕ್ಷಿಗೆ ದಿನಾಂಕ **22.09.2025** ರಂದು ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ಪ್ರತಿವಾದಿ ಪರ  ವಕೀಲರಿಂದ</u>

ದಾವಾ ಸ್ವತ್ತಿನ ಉತ್ತರಕ್ಕೆ ಕೆಂಪೇಗೌಡರ ಸ್ವತ್ತು ಇದ್ದು, ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಗಳ  ಸ್ವತ್ತು ಇದ್ದು ಈ  ಮಧ್ಯೆ ಇರುವ ಉ-ದಃ 7 ಅಡಿ ಸ್ವತ್ತು ನನಗೆ ಸೇರಿರುತ್ತದೆ. 7 ಅಡಿ ಹೊರತುಪಡಿಸಿ ಉಳಿಕೆ ಸ್ವತ್ತು ನನಗೆ ಸೇರಿರುವುದಿಲ್ಲ. ದಾವಾ ಸ್ವತ್ತನ್ನು ನ್ಯಾ.ದ ಮೂಲಕ ನಿಯೋಗಿಯನ್ನು ನೇಮಿಸಿ ಅಳತೆ ಮಾಡಲು ನನ್ನ ಯಾವುದೇ ತಕರಾರು ಇರುವುದಿಲ್ಲ. ಪ್ರತಿವಾದಿಗಳು ಅವರಿಗೆ ಸೇರಿದ ಹಳೆಯ ಮನೆಯನ್ನು ತೆರವುಗೊಳಿಸಿ ಉ-ದ 2 ಅಡಿ ಪ್ಯಾಸೇಜ್ ಬಿಟ್ಟು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಸ್ವತ್ತು 19*19  ಹಾಗೂ ಪ್ರತಿವಾದಿಯ ದೊಡ್ಡಪ್ಪನಿಗೆ ಸೇರಿದ 19*19 ಸ್ವತ್ತಿನಲ್ಲಿ 19*36 ರಲ್ಲಿ ಪ್ರತಿವಾದಿಗಳು ಮನೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಚೆನ್ನಾಗಿ ಮನೆ ನಿರ್ಮಾಣ ಮಾಡಿದ್ದು ಹೊಟ್ಟಿಕಿಚ್ಚಿನಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ನಿವೃತ್ತಿಯ ನಂತರ ಸುಳ್ಳು ದಾವೆಗಳನ್ನು ಸಲ್ಲಿಸುತ್ತಾ ಪ್ರತಿವಾದಿಗಳಿಗೆ ಕಿರುಕುಳ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ